ಅಸಲು ದಾವಾ ನಂ. 249  /2021
ಪಿ.ಡಿ.ಡಬ್ಲ್ಯು: 1

**ಸಾಕ್ಷಿಯನ್ನು ಇಂದು ದಿನಾಂಕಃ 01.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಶ್ರೀ.ಎಸ ಎ ಎಸ್ ., ವಕೀಲರಿಂದ 3 ನೇ  ಪ್ರತಿವಾದಿ ಪರವಾಗಿ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಗಂಡನ ಮನೆ ಅರ್ಜುನಗಿ ಹಾಗೂ ನನ್ನ ತವರು ಮನೆ ಬನಹಟ್ಟಿ. ಪ್ರಕಾಶ ದೊಡ್ಡಮನಿಯವರು ನನ್ನ ಗಂಡ ಎಂದರೆ ಸರಿ . ನನ್ನ ಮದುವೆ 1990 ಇಸವಿಯಲ್ಲಿ ಆಗಿರುತ್ತದೆ. ನಾನು ಹೊಲಿಗೆ ಕೆಲಸ ಮಾಡುತ್ತೇನೆ. ನಾನು ಸದರಿ ಟೈಲರಿಂಗ್ ಕೆಲಸವನ್ನು ಅರ್ಜುನಗಿಯಲ್ಲಿ ಸಹ ಮಾಡುತ್ತೇನೆ ಹಾಗೂ ಬನಹಟ್ಟಿಯಲ್ಲಿ ಸಹ ಮಾಡುತ್ತೇನೆ. ನನಗೆ ಟೈಲರಿಂಗನಿಂದ ಅಂದಾಜು 3-4 ಸಾವಿರ ರೂಪಾಯಿ ಉತ್ಪನ್ನ ಬರುತ್ತದೆ. ನಾನು ಟೈಲರಿಂಗನಿಂದ ಪ್ರತಿ ತಿಂಗಳು 3 ರಿಂದ 4 ಸಾವಿರ ಸಂಪಾದಿಸುತ್ತೇನ ಎಂದು ನನ್ನ ವಾದ ಪತ್ರದಲ್ಲಾಗಲಿ ಅಥವಾ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲ. ನನ್ನ ವಾದಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ನನ್ನ ಉದ್ಯೋಗ ಮನೆಕೆಲಸ ಎಂದು ಬರೆಸಿರುತ್ತೇನೆ ಎಂದರೆ ಸರಿ . ನನ್ನ  ವಾದಪತ್ರದಲ್ಲಾಗಲಿ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿ ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ ಎಂದು ಬರೆಸಲು ಯಾವುದೇ ತೊಂದರೆ ಇರಲಿಲ್ಲ. ಟೈಲರಿಂಗ ಮಾಡುವ ಜನರ ಸಂಘ ಇದೆ ಎಂದರೆ ಹೌದು. ಸದರಿ ಸಂಘದಲ್ಲಿ ನಾನು ಯಾವುದೇ ಸದಸ್ಯ ಇರುವುದಿಲ್ಲ. ನಾನು ಟೈಲರಿಂಗ ಕೆಲಸ ಮಾಡುವ ಸಲುವಾಗಿ ಅರ್ಜುನಗಿಯ ಗ್ರಾಮ ಪಂಚಾಯಿಂದ ಆಗಲೀ ಅಥವಾ ಬನಹಟ್ಟಿ ಸಿಟಿ ಕಾರ್ಪೋರೇಷನದಿಂದಾಗಲೀ ಯಾವುದೇ ಪರವಾನಿಗೆಯನ್ನು ಪಡೆದಿರುವುದಿಲ್ಲ. ನಾನು ಖಾಸಗಿಯಾಗಿ ಟೈಲರಿಂಗ ಕೆಲಸ ಮಾಡುವುದರಿಂದ ಪ್ರತ್ಯೇಕವಾಗಿ ಅದರಿಂದ ನನಗೆ ಉತ್ಪನ್ನ ಬರುತ್ತದೆ ಎನ್ನಲು ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿ . ಟೈಲರಿಂಗ ಕೆಲಸ ಹೊರತುಪಡಿಸಿ ಬೇರೆ ಮೂಲದಿಂದ ಉತ್ಪನ್ನ ಬರುತ್ತದೆ ಎನ್ನಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

2. ನಾನು ಟೈಲರಿಂಗ ಕೆಲಸದಿಂದ ತಿಂಗಳಿಗೆ 3 ರಿಂದ 4 ಸಾವಿರ ರೂಪಾಯಿ ಸಂಪಾದಿಸುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬನಹಟ್ಟಿಯಲ್ಲಿ ಇರುವುದರ ಬಗ್ಗೆ ನನ್ನ ವಾದಪತ್ರದಲ್ಲಾಗಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಾಗಲಿ ಕಾಣಿಸಿರುವುದಿಲ್ಲ. ಪ್ರಸ್ತುತ ದಾವೆಯನ್ನು ಹೂಡುವ ಸಮಯಕ್ಕೆ ನಾನು ಬನಹಟ್ಟಿಯಲ್ಲಿ ಇದ್ದೇನು ಎಂದು ತೋರಿಸಲು ಯಾವುದೇ ದಾಖಲಾತಿ ಇರುವುದಿಲ್ಲ. ನಾನು

ದಾವೆ ಮಾಡುವ ಕಾಲಕ್ಕೆ ಬನಹಟ್ಟಿಯಲ್ಲೇ ಇದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿ ಪ್ಲಾಟ್ ಆಗಿರುತ್ತದೆ. ಸದರಿ ಪ್ಲಾಟಿನ ಸಂಖ್ಯೆ 41 ಇರುತ್ತದೆ. ಮುನ್ಸಿಪಾಲಟಿಯಲ್ಲಿ ಸದರಿ ಪ್ಲಾಟಿಗೆ ಯಾವ ನಂಬರು ನೀಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಪ್ಲಾಟಿನ ಉತ್ತರಕ್ಕೆ ರಸ್ತೆ, ಪಶ್ಚಿಮಕ್ಕೆ ಪ್ಲಾಟ ಸಂಖ್ಯೆಃ 42, ಪೂರ್ವಕ್ಕೆ ಪ್ಲಾಟ ನಂ.40, ದಕ್ಷಿಣಕ್ಕೆ ವಡ್ಡರ ರವರ ಮನೆ ಇರುತ್ತವೆ. ಸದರಿ ದಾವಾ ಪ್ಲಾಟಿನ ಖರೀದಿ 1997 ಇಸವಿಯಲ್ಲಿ ಆಗಿರುತ್ತದೆ. ಸದರಿ ಪ್ಲಾಟನ್ನು ನಾವು ವೀರೂಪಾಕ್ಷಪ್ಪ ಕೊಳಕಿ ರವರಿಂದ ಖರೀದಿ ಮಾಡಿರುತ್ತೇವೆ. ಸದರಿ ಪ್ಲಾಟ ಬಿನ್ ಶೇತ್ಕಿ ಆಗಿದ್ದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಖರೀದಿಪತ್ರವು ನೋಂದಾಗಿರುತ್ತದೆ. ಸಾಕ್ಷಿಯು ಮುಂದುವರೆದು ನನ್ನ ಹೆಸರಿಗೆ ನೋಂದಾಗಿರುತ್ತದೆ. ಸದರಿ ಖರೀದಿ ಪತ್ರವನ್ನು ಜಮಖಂಡಿಯ ನ್ಯಾಯಾಲಯದಲ್ಲಿ ಬರೆದಿರುತ್ತಾರೆ ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿ ಖರೀದಿ ಕಾಲಕ್ಕೆ ನಾವು ರೂಪಾಯಿ 47,000/- ಮೇಲೆ ಚಿಲ್ಲರ ನೀಡಿರುತ್ತೇವೆ. ನಾನು ಸದರಿ ಹಣವನ್ನು ಟೈಲರಿಂಗ್ ಉತ್ಪನ್ನದಿಂದ ಬಂದಿದ್ದ ಹಣ ಮತ್ತು ಬೇರೆಯವರಿಂದ ಸಾಲ ಪಡೆದು ಸದರಿ ಹಣವನ್ನು ನೀಡಿರುತ್ತೇನೆ. ಸದರಿ ಸಾಲವು ಬಡ್ಡಿ ಮೇಲೆ ತೆಗೆದುಕೊಂಡಿರುತ್ತೇನೆ. ನಾನು ಸುಮಾರು ರೂಪಾಯಿ 10 ರಿಂದ 15 ಸಾವಿರ ಸಾಲವನ್ನು ಮಾಡಿದ್ದೇನು ಉಳಿದಿದ್ದ ಹಣ ನನ್ನ ಟೈಲರಿಂಗ್ ಉತ್ಪನ್ನದಿಂದ ಕೂಡಿ ಹಣದಿಂದ ಕೂಡಿಟ್ಟಿರುತ್ತೇನೆ. ನಾನು ಲಕ್ಷ್ಮೀಬಾಯಿದೇಸಾಯಿ ಅವರ ಹತ್ತಿರ ರೂಪಾಯಿ 5000 ಸಾಲ ಪಡೆದಿದ್ದೇನು ಅದರಂತೆ ಕಾಶಿಬಾಯ ಹರನಾಳ ರವರ ಹತ್ತಿರ ರೂಪಾಯಿ 5000/- ಹಾಗೂ ರತ್ನಬಾಯಿ ನಾವಿ ರವರ ಹತ್ತಿರ ರೂಪಾಯಿ 5000/- ಸಾಲ ಪಡೆದಿದ್ದೆನು. ಸದರಿ ಮೂರು ಜನ ಸಾಲ ಕೊಟ್ಟವರು ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಮೂರು ಜನರ ಸಾಲ ಕೊಟ್ಟವರ ಪೈಕಿ ಒಬ್ಬರದು ಬೇರೆ ಮೂಲದಿಂದ ಉತ್ಪನ್ನ ಬರುತ್ತಿತ್ತು ಹಾಗೂ ಇನ್ನುಳಿದ ಇಬ್ಬರು ಅವರ ಕಾಕನ ಬಳಿ ಕೇಳಿ ನನಗೆ ಸಾಲ ಕೊಟ್ಟಿರುತ್ತಾರೆ. ನಾನು ಸದರಿ ಸಾಲದ ಬಡ್ಡಿ ಎಷ್ಟು ಇತ್ತು ಎಂದು ಹೇಳಲು ಆಗುವುದಿಲ್ಲ. ಸದರಿ ಮೂರು ಸಾಲಕ್ಕೂ ಬಡ್ಡಿ ಇತ್ತು ಎಂದರೆ ಸರಿ . ನಾನು ಸದರಿ ಸಾಲ ಪಡೆದ ಕುರಿತು ಯಾವುದೇ ದಾಖಲಾತಿ ಇರುವುದಿಲ್ಲ. ಸದರಿ ಮೂರು ಸಾಲಗಳನ್ನು ಯಾವ ದಿನದಂದು ಪಡೆದಿದ್ದೇನು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಮೂರುಸಾಲಗಳನ್ನು ಮರುಪಾವತಿಸಿದ ಕುರಿತು ಯಾವುದೇ

ಪಾವತಿಯನ್ನು ಪಡೆದಿರುವುದಿಲ್ಲ ಕಾರಣ ಅವರು ನಮ್ಮ ಮನೆಯ ಸದಸ್ಯರು ಆಗಿರುತ್ತಾರೆ. ಸದರಿ ಮೂರು ಜನ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮೂರು ಜನ ನನ್ನ ಆಗುಬಾಜಿನವರು ಎಂದು ನುಡಿಯುತ್ತಾರೆ. ಅರ್ಜುನಗಿಯಲ್ಲಿ ಕೋ ಆಪರೇಟಿವ್ ಸೊಸೈಟಿ ಹಾಗೂ ಬ್ಯಾಂಕುಗಳು ಇವೆ ಎಂದರೆ ಸರಿ . ಸದರಿ ಸೊಸೈಟಿ ಮತ್ತು ಬ್ಯಾಂಕಿನಲ್ಲಿ ಬಡ್ಡಿ ಕಡಿಮೆ ಸಿಗುತ್ತದೆ ಎಂದರೆ ಸರಿ . ನಾನು ಸದರಿ ಸಾಲ ಪಡೆದ ಕುರಿತು ದಾಖಲಾತಿಗಳನ್ನು ಹಾಜರುಪಡಿಸಲು ಆಗುವುದಿಲ್ಲ. ನಾನು ಸದರಿ ದಾವಾ ಆಸ್ತಿಯನ್ನು ಕೊಂಡುಕೊಳ್ಳಲು ಪೂರ್ತಿ ಹಣ ನೀಡುವುದಕ್ಕೆ ಯಾವುದೇ ಆರ್ಥಿಕ ಸಾಮರ್ಥ ನನಗೆ ಇರಲಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಾನು ಹಣವನ್ನು ಕೂಡಿಟ್ಟು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನನ್ನ ಹೆಸರಿದ್ದು ಖರೀದಿ ಮಾಡಿದ ದಾವಾ ಆಸ್ತಿಯ ಖರೀದಿಪತ್ರವನ್ನು ಹಾಜರುಪಡಿಸಿರುತ್ತೇನೆ. ನಾನು ಸದರಿ ಖರೀದಿಪತ್ರದಲ್ಲಿ ಹಣ ಕೂಡಿಟ್ಟು ಖರೀದಿ ಮಾಡಿರುವ ಕುರಿತು ನಮೂದಿಸಿರುದಿಲ್ಲ. ನಾನು ದಾವಾ ಪ್ಲಾಟನ್ನು ಟೈಲರಿಂಗ ಕೆಲಸದಿಂದ ಬಂದ ಹಣವನ್ನು ಕೂಡಿಟ್ಟು ಹಾಗೂ ಸಾಲವನ್ನು ಪಡೆದು ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿಪತ್ರದಲ್ಲಿ ನನ್ನ ಉದ್ಯೋಗ ಏನೆಂದು ನಮೂದಿಸಲಾಗಿದೆ ಎಂದು ನಾನು ನೋಡಿರುವುದಿಲ್ಲ. ಸದರಿ ಖರೀದಿಪತ್ರದಲ್ಲಿ ನನ್ನ ಉದ್ಯೋಗ ಟೈಲರಿಂಗ ಎಂದು ನಮೂದಿಸಿದ್ದೆನು ಎಂದರೆ ಗೊತ್ತಿಲ್ಲ.

3 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ**